# ಮೊನ್ಸ್ ಕ್ಲಿಂಟ್ ಸ್ಟೀವನ್ಸ್ ಕ್ಲಿಂಟ್

## ಕಥೆ ಹೇಳುವ ಕಡಲ ತಡಿಗಳು

**ಡೆನ್ಮಾರ್ಕ್ ದೇಶದ ಮೊನ್ಸ್ ಕ್ಲಿಂಟ್ ಹಾಗೂ ಸ್ಟೀವನ್ಸ್ ಕ್ಲಿಂಟ್ ಈಚೆಗೆ ಯುನೆಸ್ಕೋ ವಿಶ್ವಪರಂಪರೆಯ ಪಟ್ಟಿಗೆ ಸೇರಿವೆ. ಪ್ರಕೃತಿ ಚೆಲುವಿನ ಜೊತೆಗೆ ಇತಿಹಾಸವನ್ನೂ ಮೆಲುಕು ಹಾಕಿಸುವ ಮನೋಹರ ತಾಣಗಳಿವು.**

■ ಸುಚೇತಾ ಕೆ. ನಾರಾಯಣ್

ಶರದೃತುವಿನ ಶುಕ್ರವಾರ. ಸಂಜೆ ಆರು ಗಂಟೆಯ ಆಸುಪಾಸು. ನಿಧಾನವಾಗಿ ಚಳಿ ಬಲಿಯತೊಡಗಿತ್ತು. ಅಂದಿನ ಕೆಲಸ ಮುಗಿಸಿ, ವಾರಾಂತ್ಯಕ್ಕೆ ಬೇಕಾಗಿದ್ದ ವಸ್ತುಗಳನ್ನೆಲ್ಲ ತುಂಬಿಟ್ಟುಕೊಂಡಿದ್ದ ಚೀಲವನ್ನು ಬೆನ್ನಿಗೇರಿಸಿಕೊಂಡು ಆಫೀಸಿನಿಂದ ಹೊರ ಬಂದೆ. ಪಕ್ಕದಲ್ಲೇ ಹರಿಯುವ ನದಿ. ಸೂರ್ಯ ಮುಳುಗುವ ಮೊದಲು ಊರನ್ನೊಮ್ಮೆ ಹೊನ್ನ ಕಿರಣಗಳ ಹೊದಿಕೆಯಿಂದ ಮುಚ್ಚೋಣವೆಂದುಕೊಂಡನೇನೋ! ಎಲ್ಲೆಡೆ ಬಂಗಾರ ಬಣ್ಣದ ಬೆಳಕು ಚೆಲ್ಲಿತ್ತು. ಆ ಬೆಳಕನ್ನು ಪ್ರತಿಫಲಿಸುತ್ತ ಮಿಂಚುತ್ತಿದ್ದ ನದಿಯ ನೀರಿನ ಮೇಲೆ ಜನರನ್ನು ಅತ್ತಿಂದಿತ್ತ ಹೊತ್ತ ಮೋಟಾರು ದೋಣಿಗಳು ತೇಲುತ್ತಿದ್ದವು! ಶುಕ್ರವಾರದ ಸಂಜೆಯ ಚಟುವಟಿಕೆಗಳನ್ನೆಲ್ಲ ನೋಡುತ್ತಾ ಮೊದಲೇ ಮಾತಾಡಿಕೊಂಡಿದ್ದಂತೆ ಕಾರು ನಿಲ್ದಾಣದ ಕಡೆಗೆ ಹೆಜ್ಜೆ ಹಾಕಿದೆ ನಾನು.

ಗೆಳೆಯರೆಲ್ಲ ಒಬ್ಬೊಬ್ಬರಾಗಿ ಬಂದು ತಲುಪಿ ಕುಶಲ ಸಂಭಾಷಣೆ ಮುಗಿಸುವಷ್ಟರಲ್ಲಿ ನಮ್ಮ ಏಳು ಜನರನ್ನು ಕರೆದೊಯ್ಯಲು ಕಾರು ತಯಾರಾಗಿ ನಿಂತಿತ್ತು. ಹತ್ತಿರದಲ್ಲಿದ್ದ ಅಂಗಡಿಯೊಂದರಲ್ಲಿ ರಾತ್ರಿಗೆ ಬೇಕಾಗಿದ್ದ ದಿನಸಿ ಸಾಮಾನುಗಳನ್ನು ಖರೀದಿಸಿ, ಕಾರು ಹತ್ತಿದೆವು. ಸುತ್ತಲೂ ಹರಡಿದ್ದ ಕತ್ತಲ ತೆರೆಯ ತೂರಿಕೊಂಡು ನಮ್ಮ ಕಾರು ಡೆನ್ಮಾರ್ಕ್ ದೇಶದ ರಾಜಧಾನಿಯಾದ ಕೋಪನ್ ಹೇಗನ್ ನಗರದೆಡೆಗೆ ಓಡಿತು.

ಶುಕ್ರವಾರದ ಸಾಯಂಕಾಲಗಳಲ್ಲಿ ಇರುವ ನಿರಾಳತೆ ಅನುಭವವೇ ಬೇರೆ. ಶಾಲಾ ದಿನಗಳಲ್ಲಿ ಶನಿವಾರದ ಮಧ್ಯಾಹ್ನ, ಕೊನೆಯ ಗಂಟೆ ಹೊಡೆದಾಗ ಆಗುವ ಸಂಭ್ರಮ ನೆನಪಿಸಿಕೊಳ್ಳಬಹುದಾದರೆ ಅದಕ್ಕೆ ಇದನ್ನು ಹೋಲಿಸಿಕೊಳ್ಳಬಹುದೇನೋ. ಕಾರು ಹತ್ತಿ ಕೂತವಳಿಗೆ ಮನದ ತುಂಬ ಹಾಡುಗಳು. ಎಲ್ಲ ಕನ್ನಡಿಗರೇ ಇದ್ದುದ್ದರಿಂದ ಅಂದು ಕನ್ನಡ ಹಾಡುಗಳ ಮೇಳವೇ ಹರಿದಿತ್ತು. ‘ಮೆಲ್ಲುಸಿರೇ ಸವಿಗಾನ’ ಎನ್ನುವ ಮಾಧುರ್ಯಭರಿತ ಹಾಡಿನಿಂದ ಹಿಡಿದು, ಎದ್ದು ಕುಣಿಯಬೇಕೆನಿಸುವ ‘ಸಂತೋಷಕ್ಕೆ ಹಾಡು ಸಂತೋಷಕ್ಕೆ’ ಎನ್ನುವ ಹಾಡಿನವರೆಗೂ ಅದೆಷ್ಟೋ ಚಲನಚಿತ್ರ ಗೀತೆಗಳನ್ನು ಕೇಳಿ, ಹಾಡಿ ಸಂತಸಪಟ್ಟಿದ್ದೆ.

ಹೊರಗೆ ಕತ್ತಲು, ಒಳಗೆ ಬೆಚ್ಚಗೆ ಕುಳಿತಿದ್ದ ನಾನು ಅದು ಯಾವಾಗ ನಿದ್ರೆಗೆ ಜಾರಿದೆನೋ ತಿಳಿಯದು. ಕೋಪನ್ ಹೇಗನ್ ಪಟ್ಟಣದಿಂದ ಕೆಲ ಮೈಲುಗಳಾಚೆ



ಸ್ಟೀವನ್ಸ್ ಕ್ಲಿಂಟ್ ಹಾಗೂ ಅಲ್ಲಿನ ಚರ್ಚ್